ಶ್ರೀ ಕೆ. ಎಚ್. ರಂಗನಾಥ್ :— ಆ ಬಗ್ಗೆ ಕ್ರಮ ಕೈಕೊಳ್ಳುತ್ತೇನೆಂದು ಈಗತಾನೆ ಹೇಳಿದ್ದೇನೆ.

ಅಧ್ಯಕ್ಷರು :—ಪ್ರಶ್ನೆ ನಂ 215 ಶ್ರೀಮಾನ್ ವಾಯಿ ಅವರ ಪರವಾಗಿ ಶ್ರೀಮಾನ್ ಬಣಕಾರ್ ಅವರು ಕೇಳಬಹುದು.

H. U. T. D. HEALTH CENTRE

215. Sri B. G. Banakar (Hirekerur) On behalf of Sri V. V. WAI (Shirahatti).—Will the Minister for Health be pleased to state :—.

(*a*) whether it has come to the notice of the Government that H U. T. D. (Heatlh Centres) in North Karnataka are being maintained by the Taluk Local Board and Grama Panchayats ;

(*b*) whether it is not a fact that these Centres in old Mysore area are being maintained by the Goverament;

(*c*) in order to have uniformity in State whether the Governn ent has contemplated to take over the said Centres ;

(*d*) whether the Government would give the financial assistance to the Taluk Development Board to run such Centres ?

Sri H. SIDDAVEERAPPA (Minister for Health)

(*a*) The Taluk Development Board are maintaining the H. U. T. D. (Health Centres) in North Karnataka. The Government is giving 50 per cent of the recurring and non-recurring expenditure.

(*b*) No.

(*c*) The question does not arise as there is uniformity already in the State.

(*d*) Yes.

ಶ್ರೀ ಬಿ. ಜಿ. ಬಣಕಾರ್: ತಾಲ್ಲೂಕ್ ಬೋರ್ಡಿನವರು ನಡೆಸುತ್ತಿರುವ ಆರೋಗ್ಯ ಕೇಂದ್ರಗಳಿಗೆ ಶೇಕಡ 50ರಷ್ಟು ಖರ್ಚನ್ನು ಸರ್ಕಾರದವರು ಕೊಡುತ್ತಿರುವುದಾಗಿ ಇಲ್ಲಿ ಹೇಳಲಾಗಿದೆ. ಆದರೆ ಉಳಿದ 50 ಭಾಗದ ಹಣವನ್ನು ಖರ್ಚ ಮಾಡಲು ಅವರಿಗೆ ಸಾಧ್ಯವಾಗುತ್ತಿಲ್ಲವಾದ್ದರಿಂದ ಅವುಗಳನ್ನು ಸರ್ಕಾರದವರೇ ವಹಿಸಿಕೊಂಡು ಜನರಿಗೆ ಒಳ್ಳೆಯ ಔಷಧೋಪಚಾರಗಳನ್ನು ಒದಗಿಸುತ್ತೀರಾ?

ಶ್ರೀ ಹೆಚ್. ಸಿದ್ದವೀರಪ್ಪ: ಇವುಗಳನ್ನು ಸರ್ಕಾರದವರೇ ತೆಗೆದುಕೊಳ್ಳಬೇಕೆಂಬ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗಿದೆ. ಈ ಅಂಶ ತಮಗೆ ಗೊತ್ತಿರುವಂತೆ ಹೋದ ಸಲ ಬಡ್ಜೆಟ್ಟಿನಲ್ಲಿ ನಮೂದಾಗಿತ್ತು. ಆದರೆ ಹಣಕಾಸಿನ ಅಭಾವದಿಂದ ಈ ವರ್ಷ ಅದನ್ನು ಕಾರ್ಯಗತ ಮಾಡುವುದಕ್ಕೆ ಆಗಲಿಲ್ಲ; ಈ ಸಲವಾದರೂ ಅದನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ಬಿ. ಜಿ. ಬಣಕಾರ್: ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯ ಆಸ್ಪತ್ರೆಗಳ ನಿರ್ಮಾಣದ ಅವಶ್ಯಕತೆ ಇರುವುದರಿಂದ ಹೆಚ್ಚಿನ ಸಂಖ್ಯೆಯ ಆಸ್ಪತ್ರೆಗಳನ್ನು ಈ ರಾಜ್ಯದಲ್ಲಿ ಸ್ಥಾಪನೆ ಮಾಡುವುದಕ್ಕೆ ಕಾರ್ಯಕ್ರಮ ಕೈಕೊಳ್ಳುತ್ತೀರಾ?

ಶ್ರೀ ಹೆಚ್. ಸಿದ್ದವೀರಪ್ಪ: ಅದನ್ನು ವಿಚಾರ ಮಾಡುತ್ತಿದ್ದೇವೆ.

ಶ್ರೀ ಜೆ. ಎಸ್. ಅಮ್ಮಣ್ಣವರ್: ಇಂದು ಅನೇಕ ಟೌನ್ ಪಂಚಾಯಿತಿಗಳು ಮುನಿಸಿಪಾಲಿಟಿಗಳಾಗಿವೆ. ಆದರೂ ಅವುಗಳಿಗೆ ಬರುವ ವರಮಾನದಲ್ಲಿ ಆಸ್ಪತ್ರೆಗಳನ್ನು ನಡೆಸಲು ಸಾಧ್ಯವಾಗುತ್ತಿಲ್ಲದಿರುವುದರಿಂದ ಅವುಗಳನ್ನು ಸರ್ಕಾರದವರೇ ವಹಿಸಿಕೊಳ್ಳುತ್ತಾರೆಯೇ?

ಶ್ರೀ ಹೆಚ್. ಸಿದ್ದವೀರಪ್ಪ: ಇದನ್ನು ತಿಳಿದುಕೊಂಡೇ ಈ ಹೊರೆಯನ್ನು ಸರ್ಕಾರದವರು ಹೊರಬೇಕಾದುದು ನ್ಯಾಯ ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಆದರೆ ದುರ್ದೈವದಿಂದ ರಾಜ್ಯದಲ್ಲಿ ಅಭಾವ ಪರಿಸ್ಥಿತಿ ಬಂದಿದ್ದರಿಂದ ಅದನ್ನು ಕಾರ್ಯಗತ ಮಾಡಲು ಹಣದ ಅಡ್ಡಿ ಬಂತು. ಈ ಬಗ್ಗೆ ತೀರ್ಮಾನವೇನೋ ಆಗಿದೆ. ಈಗ ಉಳಿದಿರುವುದು ಜಾರಿಗೆ ಕೊಡುವುದು; ಅದನ್ನು ಜಾರಿಗೆ ತರಲು ಹಣದ ಪ್ರಯತ್ನ ಮಾಡುತ್ತೇವೆ.

ಶ್ರೀ ಬಾಪೂಗೌಡ ರಾಯಪ್ಪ: ಈಗ ತಾಲ್ಲೂಕ್ ಬೋರ್ಡಿನವರು ನಡೆಸುತ್ತಿರುವ ಆಸ್ಪತ್ರೆಗಳಲ್ಲಿ ಡಿಪ್ಲೋಮಾ ಹೋಲ್ಡರ್ಸ್ ಇದ್ದಾರೆ. ಮುಂದೆ ಸರ್ಕಾರದವರು ಈ ಆಸ್ಪತ್ರೆಗಳನ್ನು ವಹಿಸಿಕೊಂಡ ಮೇಲೆ ಅವರ ಜಾಗಕ್ಕೆ ಎಂ.ಬಿ.ಬಿ.ಎಸ್. ಆದವರನ್ನು ನೇಮಕ ಮಾಡುತ್ತೀರಾ?

ಶ್ರೀ ಹೆಚ್. ಸಿದ್ಧವೀರಪ್ಪ : ಅದೇ ರೀತಿ ಮಾಡಬೇಕು ಎಂದು ಮಾಡಿದ್ದೇವೆ.

ಶ್ರೀ ಬಿ. ಜಿ. ಬಣಕಾರ್ : ಆನೇಕ ಆಸ್ಪತ್ರೆಗಳಲ್ಲಿ ಲೇಡಿ ಮೆಡಿಕಲ್ ಆಫೀಸರ್ ಪೋಸ್ಟ್ ಇದ್ದರೂ ಕೂಡ ಅವರನ್ನು ನೇಮಕ ಮಾಡಿಲ್ಲ. ಆದ್ದರಿಂದ ಹೆಣ್ಣು ಮಕ್ಕಳಿಗೆ ತೊಂದರೆಯಾಗಿದೆ. ಆದಕಾರಣ ಆ ಆಸ್ಪತ್ರೆಗಳಿಗೆ ಲೇಡಿ ಮೆಡಿಕಲ್ ಆಫೀಸರನ್ನು ನೇಮಕ ಮಾಡುವುದಕ್ಕೆ ತೀವ್ರವಾಗಿ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಹೆಚ್. ಸಿದ್ಧವೀರಪ್ಪ : ಆ ಆಸ್ಪತ್ರೆಗಳಿಗೆ ಲೇಡಿ ಮೆಡಿಕಲ್ ಆಫೀಸರನ್ನು ನೇಮಕ ಮಾಡುವುದಕ್ಕೆ ಲೇಡಿ ಮೆಡಿಕಲ್ ಆಫೀಸರು ಬರುತ್ತಿಲ್ಲ. ಲೇಡಿ ಮೆಡಿಕಲ್ ಆಫೀಸರು ಹಳ್ಳಿಗಳಿಗೆ ಹೋಗುವುದಕ್ಕೆ ಹಿಂದೆ ಮುಂದೆ ನೋಡುತ್ತಿದ್ದಾರೆ. ಆದ್ದರಿಂದ ಅವರಿಗೆ ಒಂದು ಒಳ್ಳೆಯ ವಾಸದ ಮನೆಯನ್ನು ಮಾಡಿ ಕೊಡಬೇಕು ಎಂದಿದ್ದೇವೆ. ಎಲ್ಲಾ ಗ್ರಾಮಗಳಲ್ಲಿಯೂ ಡಾಕ್ಟರಿಗೆ ವಾಸದ ಮನೆಗಳನ್ನು ಕಟ್ಟಿಸುವುದಕ್ಕೆ ಹಣ ಬೇಕು. ಆದ್ದರಿಂದ ಅದು ಹಾಗೆಯೇ ನಿಂತಿದೆ ಹಣ ಒದಗಿದ ಮೇಲೆ ಅದನ್ನು ಮಾಡಬೇಕಾಗುತ್ತದೆ.

SEVEN DAYS WORK IN A WEEK

262. SRI K. SRIRAMULU (Gandhinagar).— Will the Minister for Labour and Tourism be pleased to state :—

(*a*) whether the Government have proposed to provide employment to more number of unemployed in Public and Private Sector Undertakings by running their concerns all the seven days in a week :

(*b*) whether the Government is evolving any scheme and give effect to it from 26th January 1974 ;

(*c*) whether the Government proposes to constitute an Advisory Committee in this behalf ;

(*d*) whether the Government is having any difficulty in this behalf; if so, what are they ?

SRI S. M. YAHYA (Minister for Labour and Tourism) (*a*) There is no such proposal but Government are not against any such proposal if it is initiated on voluntary basis by agreement between workers and management.